ವನ್ನೂ ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ದೋಷ ಇಲ್ಲ. ಆದು ಸುಳ್ಳು ಎಂದು ನಾನು ಹೇಳಲಿಲ್ಲ. ಅವರು ಕಳುಹಿಸಿರತಕ್ಕಂಥ ಮಾಹಿಕ ವರದಿಯ ಸ್ಟೇಟ್‌ಮೆಂಟ್ ನನ್ನಲ್ಲಿ ಇದೆ. ಯಾವ ಯಾವುದರಲ್ಲಿ ದೋಷ ಇದೆ ನೀರಿನಲ್ಲಿ ಬ್ಯಾಕ್ಟೀರಿಯಾ ಕಂಟೆಂಟ್ಸ್ ಜಾಸ್ತಿ ಇದೆ ಎಂಬುದಾಗಿ ತಿಳಿಸಿದ್ದಾರೆ. ಅವುಗಳನ್ನು ನಿವಾರಣೆ ಮಾಡುವುದಕ್ಕೆ ಎಲ್ಲ ಕ್ರಮಗಳನ್ನು ನಮ್ಮ ಬೆಂಗಳೂರು ನಗರದ ನೀರು ಸರಬರಾಜು ಮಂಡಲಿಯವರು ತೆಗೆದುಕೊಂಡಿದ್ದಾರೆ. ಅವರು ಕೊಟ್ಟಿರತಕ್ಕಂಥ ವರದಿಯಲ್ಲಿ ದೋಷ ಇಲ್ಲವೆಂದು ಹೇಳಿಲ್ಲ. ಇರತಕ್ಕಂಥ ದೋಷವನ್ನು ಸರಿಪಡಿಸಿದ್ದಾರೆ.

SRI. A. LAKSHMI SAGAR :-Concequent upon the report that appeared in Deccan Herald yesterday, the Superintending Engineer, Bangalore Water and Sewerage Board has clarified certain points and given some explanation. Part of the explanation reads thus :

> ".....the statement argued that in large distribution system like the city of Bangalore samples in some places would be vague".

May I ask the clarification from the Hon. Minister ? We are dealing with drinking water. Utmost care is necessary on the part of the establishment which ie responsible for the distribuiion of water to Bangalore city. I would like to know weather or not the Hon. Minister had read this report ; if so what is his reaction ? When sample is taken, the sample should indicate the result of it. What does he say about it ?

ಶ್ರೀ ಎಚ್.ಸಿ. ಶ್ರೀಕಂಠಯ್ಯ :—ಕೊಟ್ಟಿರತಕ್ಕಂಥ ವರದಿಯಲ್ಲಿ ದೋಷ ಇಲ್ಲವೆಂದು ನಾನು ಹೇಳಲಿಲ್ಲ. ಕೊಟ್ಟಿರತಕ್ಕಂಥ ನೀರಿನ ಸ್ಯಾಂಪಲ್‌ನಲ್ಲಿ ದೋಷ ಇದೆ ಎಂಬುದಾಗಿ ಅವರು ತಿಳಿಸಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಬೇಕಾದಂತಹ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ಸೂಪರಿಂಟೆಂಡೆಂಟ್ ಇಂಜಿನೀಯರವರು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅದನ್ನು ನಾನು ಇನ್ನು ಓದಿಲ್ಲ. ಕೆಲವು ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಬರತಕ್ಕಂಥ ವರದಿಯನ್ನು ನಂಬುವುದೂ ಕಷ್ಟ. ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಮಗೆ ಅರಿವಾಗಿದೆ. ಆ ಅಧಿಕಾರಿಯನ್ನು ನಾನು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೀಯಾ ಎಂಬುದಾಗಿ ಕೇಳುತ್ತೇನೆ. ಆ ಅಧಿಕಾರಿಯನ್ನು ಕೇಳಿದ ಹೊರತು ನಾನು ಹೇಗೆ ಹೇಳಲಿ ? ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವೇನೆಂದರೆ ಬೆಂಗಳೂರು ನಗರದ ನಾಗರೀಕರಿಗೆ ಒಳ್ಳೆಯ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ಎಂಬುದಾಗಿ ಹೇಳುತ್ತಾರೆ. ಆದೇ ರೀತಿ ಹಿಂದೆ ಇದ್ದಂತಹ ಮುಖ್ಯ ಇಂಜಿನೀಯರ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲವೆಂದು ಬದಲಾವಣೆ ಮಾಡಿದ್ದೇವೆ. ಈಗ ಇರತಕ್ಕಂಥ ಮುಖ್ಯ ಇಂಜಿನೀಯರ್ ಬಹಳ ಚಟುವಟಿಕೆಯಿಂದ ಚುರುಕಾಗಿ ಕೆಲಸ ಮಾಡುವುದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

(ii) re : Strike by the auto-rickshaw drivers in Bangalore city

†ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ) :—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದಲೂ ಬೆಂಗಳೂರು ನಗರದ ನಾಗರೀಕರಿಗೆ ಅತಿ ಹೆಚ್ಚಿನ ತೊಂದರೆಯಾಗಿದೆ. ಅದಕ್ಕೆ ಕಾರಣ ಆಟೋರಿಕ್ಷಾದವರ ಮುಷ್ಕರ. ಇವತ್ತು ಆ ಆಟೋರಿಕ್ಷಾದವರು ತಮ್ಮ ಮುಷ್ಕರವನ್ನು ನಿಲ್ಲಿಸಿದ್ದಾರೆ. ಇವತ್ತು ಆಟೋರಿಕ್ಷಗಳು ಓಡಾಡುತ್ತಿವೆ ; ಸಂತೋಷ. ಈ ವಿಚಾರದ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆಟೋರಿಕ್ಷಾದ ಡ್ರೈವರ್‌ಗೆ ಯಾರೋ ಒಬ್ಬ ಪೋಲೀಸಿನವರು ಹೊಡೆದರು ಎಂದರೆ ಅದಕ್ಕೊ ಆಟೋ ಸ್ಟೈಕ್ ಮಾಡುತ್ತಾರೆ. ಇನ್ನು ನಾನಾ ರೀತಿಯವಾಗಿ ಯಾವುದೋ ಒಂದು ಸಣ್ಣ ವಿಚಾರಕ್ಕೆ ಆಟೋರಿಕ್ಷಾಗಳನ್ನು ನಿಲ್ಲಿಸಿಬಿಡುತ್ತಾರೆ. ಈ ರೀತಿಯಾಗಿ ಪದೇ ಪದೇ ಆಟೋರಿಕ್ಷಾದವರು ಮುಷ್ಕರ ಹೂಡುವುದನ್ನು ತಪ್ಪಿಸಬೇಕಾದುದು ಅತಿ ಅಗತ್ಯವಾಗಿದೆ. ಇದರ ಬಗ್ಗೆ ಯಾವುದಾದರೂ ಒಂದು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನನ್ನ ಮಾಹಿತಿ

ಆಟೋರಿಕ್ಷಾ. ಆಟೋರಿಕ್ಷಾಕ್ಕೆ ಸಂಬಂಧಪಟ್ಟಂತಹ ಕೆಲವು ಕಷ್ಟ-ಸುಖಗಳು ನನಗೆ ಗೊತ್ತಿವೆ. ಆದರೂ ಕೂಡ ಸರ್ಕಾರದವರು ಈ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಬಹಳ ಯೋಗ್ಯವಾದ ದರವನ್ನು ಗೊತ್ತುಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳಬಲ್ಲೆ. ಪೆಟ್ರೋಲ್ ಬೆಲೆ ೧೬ ಪರ್ಸೆಂಟ್ ಏನು ಜಾಸ್ತಿಯಾಗಿದೆ, ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವ ಹಾಗೆ ಸರ್ಕಾರದವರು ದರವನ್ನು ನಿಗದಿಮಾಡಿದ್ದಾರೆಂದು ನನ್ನ ಲೆಕ್ಕಾಚಾರದಲ್ಲಿ ವೇಧ್ಯವಾಗಿದೆ. ಇದರಲ್ಲಿ ಮುಖ್ಯವಾದ ಅಂಶವೇನೆಂದರೆ ಇರತಕ್ಕಂಥ ಒಟ್ಟು ಆಟೋರಿಕ್ಷಾಗಳಲ್ಲಿ ಕೇವಲ ೫೦೦-೬೦೦ ರಿಕ್ಷಾಗಳನ್ನು ಓಡಿಸುವ ಜನ ಪದೇ ಪದೇ ಈ ರೀತಿಯ ಗಲಾಟೆ ಮಾಡುತ್ತಿದ್ದಾರೆ. ಇದರಲ್ಲಿ ಎಲ್ಲರೂ ಕೆಟ್ಟವರೆಂದು ಹೇಳುವುದಿಲ್ಲ. ಆಟೋ ಡ್ರೈವರ್‌ಗಳಲ್ಲಿ ಕೆಲವರು ವಿದ್ಯಾವಂತರಿದ್ದಾರೆ, ಅನೇಕ ಜನ ವಯಸ್ಸಾದವರೂ ಇದ್ದಾರೆ. ಅವರು ಸಾರ್ವಜನಿಕರ ಜೊತೆಯಲ್ಲಿ ಬಹಳ ಗೌರವದಿಂದ ಭಯದಿಂದ ನಡೆದುಕೊಳ್ಳುತ್ತಾರೆ. ಕೆಲವರು ಅಂದರೆ ಲಂಗು ಲಗಾಮು ಇಲ್ಲದವರು ಎಂದು ಹೇಳುತ್ತೇವೆ. ಸುಮಾರು ೧೦ ಸಾವಿರ ಆಟೋರಿಕ್ಷಾಗಳ ಪೈಕಿ ೯ ಸಾವಿರ ಪ್ರೈವೇಟ್ ಪಾರ್ಟೀಸ್ ಇಟ್ಟುಕೊಂಡಿದ್ದಾರೆ. ಅವರಲ್ಲಿ ಬಾಡಿಗೆಗೆ ತೆಗೆದುಕೊಂಡು ದಿವಸ ೨೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ಜವಾಬ್ದಾರಿ ಇಲ್ಲ. ಮುಷ್ಕರ ಮಾಡಿದರೆ ಆತನ ಸಂಪಾದನೆ ನಷ್ಟವಾಗುತ್ತದೆ ಹೊರತು ಇನ್ನೇನು ಆತನಿಗೆ ನಷ್ಟವಾಗುವುದಿಲ್ಲ. ಆದರೆ ಇದರಿಂದ ದಿನಸವೂ ಆಫೀಸಿಗೆ ಬರತಕ್ಕಂಥವರಿಗೆ ಕಾಲೇಜಿಗೆ ಹೋಗತಕ್ಕಂಥ ವಿದ್ಯಾರ್ಥಿಗಳಿಗೆ, ಹಾಗೂ ಕಾರ್ಮಿಕರಿಗೆ ಬಹಳ ತೊಂದರೆಯಾಗಿದೆ. ಹಿಂದೆ ಕೆಲವು ಆಟೋರಿಕ್ಷಾದ ಡ್ರೈವರ್ಸ್‌ಗಳು ಸಾರ್ವಜನಿಕರಿಗೆ ಅನೇಕ ರೀತಿಯ ತೊಂದರೆಗಳನ್ನು ಕೊಟ್ಟಿದ್ದಾರೆ. ಆದರೂ ಸರ್ಕಾರ ಇವರ ಬಗ್ಗೆ ಸಹಾನುಭೂತಿ ತೋರಿ ದರವನ್ನು ನಿಗದಿ ಮಾಡಿದ್ದಾರೆ. ಆದರೆ ಇವರ ಮೇಲೆ ಒಂದು ರೀತಿಯ ಹತೋಟಿ ಇಲ್ಲದೆ ಹೋದ ಪಕ್ಷದಲ್ಲಿ ಈಗಾಗಲೇ ಸಾರ್ವಜನಿಕರಿಗೆ ಇವರ ಮೇಲೆ ಇರತಕ್ಕಂಥ ವಿಶ್ವಾಸವನ್ನು ಮತ್ತು ಇವರ ಮೇಲೆ ಇರತಕ್ಕಂಥ ಅನುಕಂಪವನ್ನು ಆಟೋರಿಕ್ಷಾದವರು ಕಳೆದುಕೊಂಡಿದ್ದಾರೆ. ಅವರಿಗೆ ಬೇರೆ ದಾರಿಯೇ ಇಲ್ಲ. ಇನ್ನು ಮೇಲೆ ಯಾರೂ ಆಟೋರಿಕ್ಷಾದಲ್ಲಿ ಓಡಾಡಬೇಡಿ ಎಂದು ಚಳುವಳಿ ಹೂಡತಕ್ಕಂಥ ಪರಿಸ್ಥಿತಿ ಬರುತ್ತದೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸ್ಸುಗಳ ಸರ್ವೀಸನ್ನು ಹೆಚ್ಚು ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟ ಪಕ್ಷದಲ್ಲಿ ಯಾರೂ ಆಟೋರಿಕ್ಷಾದಲ್ಲಿ ಪ್ರಯಾಣ ಮಾಡಲು ಬಯಸುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಆದಷ್ಟು ಶ್ರಮ ವಹಿಸಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಹಾಕಿ, ಸಾಧಾರಣವಾಗಿ ನಾಗರೀಕರಿಗೆ ಆಗತಕ್ಕಂಥ ಕಷ್ಟಗಳನ್ನು ತಪ್ಪಿಸಬೇಕಾಗಿದೆ. ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ನಗರ ಬಹಳ ದೊಡ್ಡದು ಆದ್ದರಿಂದ ಯಾವುದಾದರೂ ಅನುಕೂಲದ ವ್ಯವಸ್ಥೆಯನ್ನು ಮಾಡದೇ ಹೋದ ಪಕ್ಷದಲ್ಲಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಬಿ.ಟಿ.ಎಸ್. ಬಸ್ಸಿನ ಅನುಕೂಲವನ್ನು ಸಾರ್ವಜನಿಕರಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಿಕೊಡಬೇಕು.

ಎರಡನೆಯದಾಗಿ ಕೆಲವು ತಿಂಗಳ ಕೆಳಗೆ ನಾನು ಕಲ್ಕತ್ತಾಕ್ಕೆ ಹೋದಾಗ ಅಲ್ಲಿ ನೋಡಿದೆ. ಅಲ್ಲಿರುವ ಅನೇಕ ಜನ ನಿರುದ್ಯೋಗಿ ಎಜುಕೇಟೆಡ್ ಯೂತ್ಸ್‌ಗೆ ಅನುಕೂಲವಾಗಲೆಂದು ಸರ್ಕಾರದವರೇ ಗ್ಯಾರಂಟಿ ಕೊಟ್ಟು ಬ್ಯಾಂಕ್ ಮುಖಾಂತರ ಮಿನಿ ಬಸ್‌ನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ನಮ್ಮಲ್ಲೂ ಆ ರೀತಿಯಾಗಿ ಮಾಡಿದರೆ ನಮ್ಮಲ್ಲಿರುವ ನಿರುದ್ಯೋಗಿ ಎಜುಕೇಟೆಡ್ ಯೂತ್ಸ್‌ಗೂ ಅನುಕೂಲವಾಗುತ್ತದೆ. ಮತ್ತೆ ಬಿ.ಟಿ.ಎಸ್.ಗೆ ಸಹಾಯವನ್ನು ಮಾಡಿದ ಹಾಗೆ ಆಗುತ್ತದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

ಮೂರನೆಯದಾಗಿ ಆಟೋರಿಕ್ಷಾಗಳು ಪಬ್ಲಿಕ್ ಕ್ಯಾರಿಯರ್. ಅವರಿಗೂ ಒಂದು ರೀತಿಯ ಜವಾಬ್ದಾರಿ ಇದೆ. ಅವರಿಗೂ ಯಾವ ರೀತಿಯ ಅನುಕೂಲವನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಡಬೇಕು. ಆದರೆ ಅವರು ಕ್ರಮ ಇಲ್ಲದೆ ಮುಷ್ಕರವನ್ನು ಮಾಡಿದರೆ ಅವರ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡಿದರೆ ಅವರು ಹತೋಟಿಗೆ ಬರುತ್ತಾರೆಂದು ನನಗನ್ನಿಸುತ್ತಿದೆ ಮೊನ್ನೆ ದಿವಸ ನನ್ನ ವಾಹನ ಇರಲಿಲ್ಲ. ಯಾವುದೇ ಆಟೋರಿಕ್ಷಾ ಇಲ್ಲದೆ ಇಲ್ಲಿಂದ ಬಸವನಗುಡಿಯವರೆಗೂ ನಡೆದುಕೊಂಡು ಹೋಗುವ ಪರಿಸ್ಥಿತಿ ಬಂತು. ಅನೇಕ ಸಂದರ್ಭಗಳಲ್ಲಿ ಗಂಟಗಟ್ಟಲೇ ಕಾಯ್ದರೂ ಆಟೋರಿಕ್ಷಾಗಳೇ ಸಿಕ್ಕದೆ ಬಹಳ ತೊಂದರೆಯಾಗಿದೆ. ನನಗೆ ಸಾಕಾದಷ್ಟು ಆಟೋರಿಕ್ಷಾ ಡ್ರೈವರ್‌ಗಳ ಬಗ್ಗೆ ಸಹಾನುಭೂತಿ ಇದೆ. ಅವರಿಗೆ ಖಂಡಿತವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಏನು ದರವನ್ನು ನಿಗದಿ ಮಾಡಬೇಕೋ ಅದನ್ನು ಮಾಡೋಣ. ಅವರು ಈ ಒಂದು ವಿಚಾರವನ್ನು ಎಚ್ಚರಿಕೆಯಿಂದ ತೆಗೆದುಕೊಂಡು ಜನಗಳ ಬಗ್ಗೆ ನಮ್ರತೆ

ಯಿಂದ ವರ್ತಿಸಬೇಕೇ ವಿನಹ ಜನಗಳನ್ನು ಕೀಟಲೆ ಮಾಡಿ ತೊಂದರೆಗೀಡುಮಾಡುವುದು ಬಹಳ ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಆಟೋರಿಕ್ಷಾದವರಿಂದ ಆಗುತ್ತಿರತಕ್ಕ ಅನ್ಯಾಯವನ್ನು ಮತ್ತು ಅವರು ಅಕ್ರಮವಾಗಿ ನಡೆದುಕೊಳ್ಳುತ್ತಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅದಕ್ಕೆ ನಮ್ಮ ಪೂರ್ಣ ಬೆಂಬಲ ಇದೆ. ಅವರಿಗೆ ಕಷ್ಟಕಾರ್ಪಣ್ಯಗಳಿದ್ದರೆ ಅದಕ್ಕೆ ಏನು ಬೇಕಾದರೂ ತೀರ್ಮಾನ ಮಾಡೋಣ. ಆದರೆ ಅವರಲ್ಲಿ ೨-೩ ಸಂಘಗಳಾಗಿ ಒಬ್ಬರು ಬೇಕು ಎನ್ನುವುದು ಮತ್ತೊಬ್ಬರು ಬೇಡ ಎನ್ನುವುದು ಮಾಡುತ್ತಿದ್ದಾರೆ. ಈ ರೀತಿ ಅಕ್ರಮವಾದ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದನ್ನು ಸಾಧ್ಯವಾದಷ್ಟು ಬೇಗ ತಪ್ಪಿಸಿ ನಾಗರೀಕರಿಗೆ ಆಗುತ್ತಿರತಕ್ಕ ಕಿರುಕುಳವನ್ನು ತಪ್ಪಿಸಲು ಸರಿಯಾದ ಒಂದು ನಿಲುವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಮುಂದೆ ಇಂಥ ಕಷ್ಟಗಳು ನಾಗರೀಕರಿಗೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಪಿ. ರಾಮಚಂದ್ರೇವ್ (ಮಲ್ಲೇಶ್ವರ) :—ಸ್ವಾಮಿ, ಪ್ರತಿ ಅಧಿವೇಶನದ ಸಂದರ್ಭದಲ್ಲೂ ಆಟೋರಿಕ್ಷಾ ಚಾಲಕರು ಮುಷ್ಕರ ಹೂಡತಕ್ಕದ್ದು ಕಂಡುಬರುತ್ತಿದೆ. ಕಳೆದ ಅಧಿವೇಶನದಲ್ಲಿ ಸುಮಾರು ೩ ಬಾರಿ ಮುಷ್ಕರ ಹೂಡಿದ್ದರು. ಇತ್ತೀಚೆಗೆ ೩ದಿನಗಳ ಕಾಲ ಮುಷ್ಕರ ಹೂಡಿ ಜನರನ್ನು ನಾನಾ ತೊಂದರೆಗಳಿಗೆ ಸಿಕ್ಕಿಸಿದ್ದಾರೆಂದರೆ ತಪ್ಪಾಗಲಾರದು. ನನಗಾದರೂ ಅನ್ನಿಸುತ್ತಿದೆ, ಜನತೆಯ ಬಗ್ಗೆ ಒಂದು ಅನುಕಂಪ ಈ ಆಟೋರಿಕ್ಷಾದವರಿಗೆ ಇಲ್ಲ ಎಂದು ಆದ್ದರಿಂದ ಸರ್ಕಾರದವರು ಇದನ್ನು ಬಹಳ ಫರ್ಮ್ ಆಗಿ ಹ್ಯಾಂಡಲ್ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಸರ್ಕಾರದವರು ಈಗಾಗಲೇ ಆಟೋದರದ ಬಗ್ಗೆ ಒಂದು ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ: ಆದರ ಮೇಲೆ ಅಬಜಕ್ಷನ್ಸ್ ಹಾಕಿ ನಂತರವೂ ಸರಿ ಹೋಗದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುವುದು ಸೂಕ್ತವಾಗಿತ್ತು. ಆದರೆ 'ಎಕಾ'ಎಕಿ ಒಂದು ಯೂನಿಯನ್‌ಗೆ ಸಂಬಂಧಪಟ್ಟ ಸದಸ್ಯರೆಲ್ಲ ಸೇರಿಕೊಂಡು ಎಲ್ಲ ಆಟೋರಿಕ್ಷಾದವರನ್ನು ಬೆದರಿಸಿ ಮುಷ್ಕರ ಹೂಡಿರತಕ್ಕದನ್ನು ನಾವು ಪೂರ್ಣವಾಗಿ ಖಂಡಿಸಬೇಕಾಗಿದೆ. ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡತಕ್ಕ ಶಕ್ತಿ ಮಾನ್ಯ ಗುಂಡೂರಾಯರಿಗೆ ಇದೆ. ಆದರೆ ಈ ಸಂದರ್ಭದಲ್ಲಿ, ಬೆಂಗಳೂರು ಜನರು ಕೇವಲ ಆಟೋರಿಕ್ಷಾ ಅಥವಾ ಬಿ.ಟಿ.ಎಸ್. ಬಸ್ಸುಗಳ ಕಡೆಗೆ ನೋಡದ ಹಾಗೆ ಬೇರೆ ಬದಲಿ ಸಾರಿಗೆ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈ ಬಗ್ಗೆ ಅನೇಕ ವರ್ಷಗಳ ಹಿಂದೆಯೇ ಚರ್ಚೆಯಾಗಿದೆ ಈ ಬೆಂಗಳೂರು ನಗರದಲ್ಲಿ ಒಂದು ಇಂಟರ್‌ನಲ್ ರೈಲ್ವೆ ಸಿಸ್ಟಂ ಅನ್ನು ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಚರ್ಚೆಯಾಗಿತ್ತು. ಆದರೆ ಅದರ ಬಗ್ಗೆ ಪುನಃ ಚರ್ಚೆಯಾದದ್ದನ್ನು ಕಾಣಲಿಲ್ಲ. ಕಲ್ಕತ್ತದಲ್ಲಿ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಸುರಂಗ ರೈಲ್ವೆ ಪ್ರಾರಂಭ ಮಾಡಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಾಹನಗಳನ್ನು ತಡೆದುಕೊಳ್ಳಲು ರಸ್ತೆಗಳಿಗೆ ಸಾಧ್ಯವಿಲ್ಲ. ಈಗಾಗಲೇ ಕಿಷ್ಕಿಂದವಾಗಿದೆ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ, ಆದಷ್ಟು ಬೇಗ ಸುರಂಗ ರೈಲ್ವೆ ವ್ಯವಸ್ಥೆಯನ್ನು ಮಾಡಿ ಜನಗಳು ಹೆಚ್ಚು ಹೆಚ್ಚಾಗಿ ಬಿ.ಟಿ.ಎಸ್, ಬಸ್ಸುಗಳನ್ನಾಗಲೀ ಅಥವಾ ಆಟೋರಿಕ್ಷಾಗಳನ್ನಾಗಲಿ ಅವಲಂಭಿಸತಕ್ಕದ್ದನ್ನು ತಪ್ಪಿಸಬೇಕೆಂದೂ ಮತ್ತು ಆಟೋ ಚಾಲಕರ ಮುಷ್ಕರವನ್ನು ಬಹಳ ಫರ್ಮ್ ಆಗಿ ಹ್ಯಾಂಡಲ್ ಮಾಡಬೇಕೆಂದೂ ಹಾಗೂ ಇಂತಹ ಮುಷ್ಕರಗಳಿಗೆ ಇನ್ನು ಮುಂದೆ ಅವಕಾಶವಿಲ್ಲದಂತೆ ಮಾಡಬೇಕೆಂದುಹೇಳುತ್ತೇನೆ. ಇಪತ್ತಿನ ದಿವಸ ಜನತೆ ಯಾರೂ ಅವರ ಕಡೆಗೆ ಇಲ್ಲ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ) :—ಸ್ವಾಮಿ, ಕೆಲವಾರು ವಿಚಾರಗಳನ್ನು ಮಾನ್ಯ ಸ್ನೇಹಿತರುಗಳು ಹೇಳಿದ್ದಾರೆ. ಮುಖ್ಯವಾಗಿ ದರದ ವ್ಯತ್ಯಾಸದಿಂದ ಈ ಮುಷ್ಕರ ಬಂದಿರುವುದು. ಕೇಂದ್ರದ ಬಡ್ಜೆಟ್ ಮಂಡನೆಯ ನಂತರ ಪೆಟ್ರೋಲ್ ಮತ್ತು ಬಿಡಿ ಭಾಗಗಳ ಬೆಲೆ ೨೦ ಪರ್ಸೆಂಟ್ ಜಾಸ್ತಿಯಾಗಿದೆ. ಇಲ್ಲಿ ಬಾಡಿಗೆಯನ್ನು ಹೆಚ್ಚು ಮಾಡಬೇಕಾದರೂ ಕೊಡ ಅದೇ ಪ್ರಮಾಣದ ದರದಲ್ಲಿ ಜಾಸ್ತಿ ಮಾಡಬೇಕೇ ವಿನಹ ಅದಕ್ಕಿಂತ ಜಾಸ್ತಿಯಾಗಬಾರದು ಸರ್ಕಾರದವರು ಈಗ ಏನು ಒಂದು ದರವನ್ನು ಗೊತ್ತು ಮಾಡಿ ನೋಟಿಫಿಕೇಷನ್ ಹೊರಡಿಸಿದ್ದಾರೆ ಅದು ಆ ಪ್ರಮಾಣಕ್ಕೆ ಅನುಗುಣವಾಗಿದೆ. ಅದು ಕನಿಷ್ಟ ದರ ೯೦ಪೈಸೆ ಎಂದು ನಂತರದ ಪ್ರತಿ ಕಿಲೋ ಮೀಟರಿಗೆ ೫೦ ಪೈಸೆ ಎಂದು ಇದೆ. ಆದರೆ ಮತ್ತೊಂದು ಚಾಲಕರ ಸಂಘ ಕನಿಷ್ಟದರ ೧-೨೫ಪೈಸೆ ಇರಬೇಕೆಂದೂ ಮತ್ತು ನಂತರ ಪ್ರತಿ ಕಿಲೋ ಮೀಟರಿಗೆ ೭೫ ಪೈಸೆ ಇರಬೇಕೆಂದು ಕೇಳುತ್ತಿರುವುದು ಶೇಕಡ ೬೬ರಷ್ಟು ಜಾಸ್ತಿಯಾಗುತ್ತದೆ. ಆಪರಲ್ಲಿ ೩ ಸಂಘಗಳಿವೆ ಮುಖ್ಯವಾಗಿ, ೨ಸಂಘಗಳಲ್ಲಿ ಹೆಚ್ಚು ಮಂದಿ ಚಾಲಕರು ಇದ್ದಾರೆ : ಈವುಗಳ

ಪೈಕಿ ಸಿ.ಪಿ.ಎಂ. ನ ನಾಯಕರಾದ ಶ್ರೀಮಾನ್ ಸೂರ್ಯನಾರಾಯಣ್‌ರವರ ಸಂಘದಲ್ಲಿ ೩ಸಾವಿರ ಚಾಲಕರು ಇದ್ದಾರೆ; ಆಡಳಿತ ಪಕ್ಷದ ಶಾಸಕರಾದ ಶ್ರೀ ಎಂ. ಡಿ. ನಟರಾಜ್‌ರವರ ಸಂಘದಲ್ಲೂ ಹೆಚ್ಚು ಮಂದಿ ಚಾಲಕರು ಇದ್ದಾರೆ. ಇವುಗಳಲ್ಲದೆ ಮತ್ತೊಂದು ಬೇರೆ ಸಂಘ ಇದೆ. ದರದ ಬಗ್ಗೆ ಸರ್ಕಾರದವರು ಸಮಜಾಯಿಸಿ ಮಾಡಿ ಹೇಳಿದ್ದನ್ನು ಮೊದಲ ಎರಡು ಸಂಘಗಳ ಅಧ್ಯಕ್ಷರು ಒಪ್ಪಿದ್ದಾರೆ. ಆ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಇನ್ನು ಏಪ್ರಿಲ್ ತಿಂಗಳ ನಂತರ ಕಚ್ಚಾ ತೈಲಗಳು ಬರುವ ಸಂಭವ ಇರುವುದರಿಂದ ಆ ಸಮಯದಲ್ಲಿ ಮತ್ತಷ್ಟು ತೈಲದ ಬೆಲೆ ಜಾಸ್ತಿಯಾಗಬಹುದು. ಆದ್ದರಿಂದ ದರದ ವಿಚಾರದಲ್ಲಿ ಒಂದುವರ್ಷದ ಮಟ್ಟಿಗಾಗಲೀ ಎರಡು ವರ್ಷದ ಮಟ್ಟಿಗಾಗಲೀ ಬದಲಾವಣೆ ಮಾಡುವುದಿಲ್ಲವೆಂಬ ಒಂದು ನಿರ್ಣಯವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಇದು ಎಸೆನ್‌ಷಿಯಲ್ ಸರ್ವೀಸ್ ಎಂದು ತೀರ್ಮಾನ ಮಾಡಿ ಅದಕ್ಕೆ ಬೇಕಾಗುವ ಗೈಡ್‌ಲೈನ್ಸ್ ಏನಿವೆ ಅವನ್ನು ಅವರಿಗೆ ತಿಳಿಸಬೇಕಾಗುತ್ತದೆ ಈಗಾಗಲೇ ತೆರಿಗೆಯಿಂದ ಶೇಕಡ ೧೫–೨೦ರಷ್ಟು ಬೆಲೆ ಜಾಸ್ತಿಯಾಗಿದ್ದರೆ ಆಟೋಗಳ ಬಾಡಿಗೆ ದರದಲ್ಲಿ ಶೇಕಡ ೨೫ರಷ್ಟು ಜಾಸ್ತಿ ಮಾಡಲಾಗಿದೆ. ಆ ದರವನ್ನು ೨ ಸಂಘಗಳು ಒಪ್ಪಿಕೊಳ್ಳುವ ರೀತಿಯಲ್ಲಿವೆ. ೩ನೇ ಸಂಘದ ಕೆಲವು ಜನರು ಸೇರಿಕೊಂಡು ಉಳಿದೆರಡು ಸಂಘದ ಚಾಲಕರುಗಳನ್ನು ದಬ್ಬಾಳಿಕೆ ರೀತಿಯಲ್ಲಿ ತೊಂದರೆ ಪಡಿಸಿದ್ದಾರೆ; ಅವರು ಆಟೋಗಳನ್ನು ನಡೆಸುತ್ತಿದ್ದರೆ ಅವರಿಗೆ ಬೆದರಿಕೆ ಹಾಕಿದ್ದಾರೆ. ಆದ್ದರಿದ ಮುಖ್ಯವಾದ ದೊಡ್ಡ ಎರಡು ಸಂಘಗಳು ಏನಿವೆ ಅವುಗಳ ನಾಯಕರುಗಳನ್ನು ಕರೆಸಿ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಯು. ಬಿ ಬೋರ್ಕರ್:—ಸದರಿ ವಿಚಾರದ ಬಗ್ಗೆ ನಾನು ಎರಡು ಮಾತುಗಳನ್ನು ಆಡಬಯಸುತ್ತೇನೆ.

ಅಧ್ಯಕ್ಷರು:—ತಾವು ಕಾರವಾರ ಜಿಲ್ಲೆಯವರು. ಆಟೋರಿಕ್ಷಾದವರಿಗೂ ನಿಮಗೂ ಏನು ಸಂಬಂಧ ?

ಶ್ರೀ ಮಳ್ಳೂರು ಆನಂದರಾವ್:—ನನಗೆ ಅರ್ಧ ನಿಮಿಷ ಮಾತ್ರ ಕೊಡಿ ಸಾಕು.

ಅಧ್ಯಕ್ಷರು:—ಮಾನ್ಯಮಂತ್ರಿಗಳು ಉತ್ತರ ಕೊಟ್ಟಬಳಿಕ ಸ್ಪಷ್ಟೀಕರಣ ಇದ್ದರೆ ಕೇಳಿ.

† ಶ್ರೀ ಆರ್. ಗುಂಡೂರಾವ್ (ಸಾರಿಗೆ ಶಾಖೆಯ ಮಂತ್ರಿಗಳು):– ಅಧ್ಯಕ್ಷರೇ, ಕಳೆದ ೩–೪ದಿವಸಗಳಿಂದ ಆಟೋರಿಕ್ಷಾ ಚಾಲಕರ ಸಂಘದವರು ಮುಷ್ಕರವನ್ನು ನಡೆಸುತ್ತಿದ್ದರು. ಅದು ನಿನ್ನೆಗೆ ಕೊನೆಗೊಂಡಿದೆ. ಆಟೋರಿಕ್ಷಾಗಳು ಇವತ್ತು ಓಡಾಡುತ್ತಿವೆ ಎಂಬುದನ್ನು ಮಾನ್ಯ ಸದಸ್ಯರೆಲ್ಲರು ಒಪ್ಪಿದ್ದಾರೆ. ಮುಖ್ಯವಾಗಿ ಮಾನ್ಯಸದಸ್ಯರುಗಳು ಹೇಳಿದ ಮಾತುಗಳನ್ನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅವರು ಯಾವುದೇ ಕಾರಣಕ್ಕಾಗಿಯು ಇಷ್ಟು ಅತುರವಾಗಿ ಮುಷ್ಕರವನ್ನು ನಡೆಸಬಾರದಾಗಿತ್ತು. ಮುಷ್ಕರ ನಡೆಸಿದ್ದು ಸರಿ ಎಂದು ಹೇಳುವುದಿಲ್ಲ. ಅವರ ಬೇಡಿಕೆಗಳು ಏನಿದ್ದರೂ ಅವುಗಳ ಪರಿಣಾಮ ಸಾರ್ವಜನಿಕರ ಮೇಲೆ ಆಗುತ್ತದೆ. ಈವೊತ್ತು ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಇರುವ ಹಾಗೆ ಒಂದು ವಿದ್ಯುಚ್ಛಕ್ತಿ ರೈಲಿನ ಸೌಕರ್ಯವಾಗಲಿ ಅಥವಾ ಒಂದು ಟ್ರಾಂವೇ ಸೌಕರ್ಯವಾಗಲಿ ಅಥವಾ ಇನ್ನು ಯಾವುದೇ ತರಹ ಒಂದು ಸೌಕರ್ಯವಾಗಲಿ ಇಲ್ಲ. ಉದಾಹರಣೆಗೆ ಬೊಂಬಾಯಿನಲ್ಲಿ, ಮದ್ರಾಸ್‌ನಲ್ಲಿ ಮತ್ತು ಕಲ್ಕತ್ತಾದಲ್ಲಿರುವ ಸಿಟಿಗಳಲ್ಲಿ ಸುಮಾರು ೪೫ ರಿಂದ ೫೦ ಪರ್ಸೆಂಟ್ ಆಷ್ಟು ಜನ ಈ ಒಂದು ಸೌಕರ್ಯದಿಂದ ಓಡಾಡುತ್ತಾ ಇದ್ದಾರೆ. ಆದರೆ ಇಲ್ಲಿರುವ ನಮ್ಮ ಬೆಂಗಳೂರಿನ ಜನರಿಗೆ ಆ ತರಹ ಯಾವುದೇ ಇಲ್ಲವಾದ್ದರಿಂದ ಅವರೆಲ್ಲಾ ಬಿ.ಟಿ.ಎಸ್.ನ್ನೇ ಅವಲಂಬಿಸಿಕೊಂಡಿರಬೇಕಾದರೆ ತಾವು ಸಹ ನೋಡುತ್ತಾ ಇದ್ದೀರಿ ಮತ್ತು ನಾನೂ ಸಹ ಅನೇಕ ಸಲ ನೋಡುತ್ತಾ ಇದ್ದೇನೆ. ಇಲ್ಲಿ ಬಿ.ಟಿ.ಎಸ್. ಬಸ್ ಸೌಕರ್ಯ ಇಲ್ಲದೇ ಹೋದರೆ ಬಹಳ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದ್ದನ್ನು ನಾನು ಕೊಡ ಒಪ್ಪಿಕೊಳ್ಳುತ್ತೇನೆ, ಮತ್ತು ಪ್ರತಿದಿನವು ಸಹ ನೋಡುತ್ತಲೂ ಇದ್ದೇನೆ. ನಿಜವಾಗಲೂ ಹೇಳುವುದಾದರೆ ನಾನು ಒಂದು ಕಡೆ ಸರ್ಕಾರದ ಮಂತ್ರಿಗಳಾಗಿದ್ದರೂ ಸಹ ಇನ್ನೊಂದು ಕಡೆ ಈ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಮತ್ತೊಂದು ಮೋಟಾರ್ ವಹಿಕಲ್ ಆಕ್ಟ್‌ನ್ನು ಏನ್‌ಫೋರ್ಸ್ ಮಾಡುವಂಥಾ ಒಂದು ಖಾತೆಯೂ ಕೂಡ ನನ್ನ ಕೈಕೆಳಗೆ ಇರುವುದರಿಂದ ಇದರ ತೊಂದರೆಗಳು ಏನು ಇವೆ ಅನ್ನುವುದು ಗೊತ್ತಿದೆ. ನಾನು ಈ ಇಲಾಖೆಯ ಮಂತ್ರಿಯಾಗಿ

ಸುಮ್ಮನೆ ಕಣ್ಣುಮುಚ್ಚಿಕೊಂಡು ಕೂತುಕೊಳ್ಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಒಂದು ಬಸ್ಸಿನಲ್ಲಿ ೬೦ ಜನ ಹಾಕಬೇಕು ಅಂತ ಇದ್ದರೂ ಸಹ ನಾವು ನೋಡಿದ ಹಾಗೆ ೯೦–೧೦೦ ಜನರನ್ನು ಕೊರಿಸಿಕೊಂಡು, ಜನರು ಎಷ್ಟು ಕಷ್ಟದಿಂದ ಹೋಗುತ್ತಿದ್ದಾರೆ ಅನ್ನುವುದು ನನಗೆ ಗೊತ್ತಿದೆ.

[MR. CHAIRMAN (SRI H. T. KRISHNAPPA) in The Chair.]

ಹೀಗೆ ಏತಕ್ಕಾಗುತ್ತದೆ ಎಂದರೆ ಸಾಮಾನ್ಯವಾಗಿ ಬೆಂಗಳೂರು ನಗರದಲ್ಲಿ ಜನಸಂಖ್ಯೆ ಏರುತ್ತಾ ಇರುವುದರಿಂದಲೂ ಮತ್ತು ಇಲ್ಲಿ ಅನೇಕ ಹೊಸ ಹೊಸ ಬಡಾವಣೆಗಳು ಬೇರೆ ಬೇರೆ ಕಡೆ ಬೆಳೆಯುತ್ತಾ ಇರುವುದರಿಂದಲೂ ಅವರೆಲ್ಲರೂ ಈ ಬಸ್ಸುಗಳಲ್ಲೇ ಪ್ರಯಾಣ ಮಾಡಬೇಕಾಗಿರುತ್ತೆ. ಆದರೆ ಬೆಂಗಳೂರಿನಲ್ಲಿ ಜನ ಸಂಖ್ಯೆ ಬೆಳೆದ ಹಾಗೆಲ್ಲಾ ಬಸ್ಸುಗಳ ಸಂಖ್ಯೆ ಬೆಳೆಯುತ್ತಾ ಇಲ್ಲ. ಜನಸಂಖ್ಯೆ ಬೆಳೆದ ಹಾಗೆ ಬಸ್ಸುಗಳ ಸಂಖ್ಯೆ ಬೆಳೆಯುತ್ತಾ ಇಲ್ಲ. ಅದುದರಿಂದ ಇಷ್ಟೊಂದು ಜನರು ಈ ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಾ ಇದ್ದಾರೆ ಅನ್ನುವುದು ನನಗೆ ಗೊತ್ತಿದೆ. ಒಂದು ವೇಳೆ ಅದೇ ರೀತಿಯಾಗಿ ಬಸ್ಸುಗಳ ಸಂಖ್ಯೆಯೂ ಕೊಡು ಜಾಸ್ತಿ ಬೆಳೆದಿದ್ದರೆ ಜನರಿಗೆ ಅಷ್ಟೊಂದು ತೊಂದರೆಯಾಗುತ್ತಾ ಇರಲಿಲ್ಲ ಎಂದು ನನ್ನ ಭಾವನೆ. ಈ ಒಂದುದಿಶೆಯಲ್ಲಿ ನಾವು ಸಾಕಷ್ಟು ಬಸ್ಸುಗಳನ್ನು ಹಾಕಬೇಕಾದರೆ ನಾನು ಈಗಾಗಲೇ ಹೇಳಿದಹಾಗೆ ಈ ಬಗ್ಗೆ ನಾನು ಸಕಲ ಪ್ರಯತ್ನವನ್ನೂ ಕೂಡ ಮಾಡುತ್ತಿದ್ದೇನೆ. ಮೇಲಾಗಿ ಈ ಇಲಾಖೆ ನನ್ನ ಕೈಗೆ ಬಂದು ಒಂದು ವರ್ಷವಾಯಿತು. ಈ ಇಲಾಖೆ ಬೇರೆ ಇಲಾಖೆಗಳಿಗಿಂತಲೂ ಒಂದು ವಿಶೇಷ ಇದೆ ಅದೇನೆಂದರೆ ಈ ಬಗ್ಗೆ ಏನಾದರೂ ಉತ್ತಮವಾದ ಕೆಲಸ ಮಾಡಬೇಕಾದರೆ ಒಂದು ದಿವಸದಲ್ಲೇ ಆಗಲಿ ಆಜ್ಞೆ ಮಾಡಿಬಿಟ್ಟು ಈ ಇಲಾಖೆಯನ್ನು ಒಂದು ವರ್ಷದೊಳಗೆ ಉತ್ತಮ ಪಡಿಸಬೇಕು ಎಂದು ಹೇಳುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ಒಂದು ಬಸ್ಸನ್ನು ರಸ್ತೆಗೆ ಹಾಕಬೇಕಾದರೆ ಅದಕ್ಕೆ ಛಾಸಿ ತರಿಸಬೇಕಾಗುತ್ತದೆ, ನಂತರ ಅದಕ್ಕೆ ಬಾಡಿ ಕಟ್ಟಿಸಬೇಕಾಗಂತ್ತದೆ ಇನ್ನು ಏನೇನೋ ಕೆಲಸಗಳನ್ನು ಮಾಡಿಸಬೇಕಾಗುತ್ತದೆ. ಇವೆಲ್ಲವನ್ನೂ ಮಾಡಬೇಕಾದರೆ ನಾವು ಮೊದಲು ಟೆಂಡರ್ ಕರೆಯಬೇಕಾಗುತ್ತದೆ ಮತ್ತು ಇದಕ್ಕೆ ಕೆಲವು ಕಾನೂನುಗಳು ಇವೆ ಅದರಂತೆ ಮಾಡಿಬೇಕಾಗುತ್ತದೆ. ಅದು ಬಿಟ್ಟು ಯಾರೋ ಒಬ್ಬರನ್ನು ಕರೆದುಬಿಟ್ಟು ಇದಕ್ಕೆ ಬಾಡಿ ಕಟ್ಟಿಕೊಡಿರಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಮತ್ತು ಆ ರೀತಿ ಮಾಡುವುದು ಕಾನೂನು ರೀತ್ಯಾ ಸರಿಯೂ ಅಲ್ಲ. ಒಂದು ವೇಳೆ ಆ ರೀತಿ ಮಾಡಿದರೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯವರು ಈ ಬಗ್ಗೆ ಟೆಂಡರ್ ಏನಾದರೂ ಕರೆದರಾ ಮತ್ತು ಪೇಪರ್‌ನಲ್ಲಿ ಏನಾದರೂ ಹಾಕಿಸಿದಿರಾ ಅಂತ ಕೇಳುತ್ತಾರೆ. ಆದುದರಿಂದ ನಾನು ಈ ಬಗ್ಗೆ ಟೆಂಡರ್ ಕರೆಯದೇ ಕೊಡುವುದಕ್ಕೆ ಸಾಧ್ಯವೇ ಇಲ್ಲಾ. ಹಾಗೇನಾದರೂ ಏನೂ ಮಾಡದೆ ಬಾಡಿ ಕಟ್ಟುವುದಕ್ಕೆ ಕೊಟ್ಟರೆ ಅದಕ್ಕೆಲ್ಲಾ ನಾವು ಉತ್ತರ ಕೊಡಬೇಕಾಗುತ್ತದೆ. ನಾವು ೧೫೦ ಬಸ್ಸುಗಳನ್ನು ರಸ್ತೆಗೆ ಬಿಡಬೇಕಾದರೆ ಏನು ಒಂದು ಕಾನೂನು ಅನ್ವಯಿಸುತದೋ ಅದೇ ರೀತಿಯಾಗಿ ಒಂದು ಬಸ್ಸನ್ನು ಓಡಿಸಬೇಕಾದರೂ ಅದೇ ಕಾನೂನು ಅನ್ವಯಿಸಬೇಕಾಗುತ್ತವೆ. ಜೊತೆಗೆ ನಾವು ಕೆಲವು ಕಂಪನಿಗೆ ಜಾಸ್ತಿ ಬೇಕು ಎಂದು ಮನವಿ ಮಾಡಿಕೊಂಡಿದ್ದೇವೆ. ಈ ಒಂದು ತೊಂದರೆ ಬರೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದರಲ್ಲೇ ಅಲ್ಲ ಇಡೀ ರಾಷ್ಟ್ರಮಟ್ಟದಲ್ಲೇ ಇದೆ. ನಾವು ಈ ವಿಚಾರವಾಗಿ ಟಾಟಾ ಕಂಪನಿಯವರನ್ನೂ ಮತ್ತು ಅಶೋಕ ಲೇಲ್ಯಾಂಡ್ ಕಂಪನಿಯವರನ್ನು ಕರೆಸಿ ಮೂರು ಸಾರಿ ಮೀಟಿಂಗ್ ಮಾಡಿ ನಮಗೆ ಛಾಸಿ ಇಲ್ಲದೇ ಬಹಳ ತೊಂದರೆಯಾಗಿದೆ, ನಾವು ಜನಸಂಖ್ಯೆಗೆ ತಕ್ಕಂತೆ ಜಾಸ್ತಿ ಬಸ್ಸುಗಳನ್ನು ಹಾಕಬೇಕಾಗಿರುವುದರಿಂದ ವಿಶೇಷವಾಗಿ ನಮ್ಮ ಕಡೆ ಗಮನ ಕೊಟ್ಟು ಹೆಚ್ಚು ಛಾಸಿ ಕೊಡಬೇಕು ಎಂದು ಮನವಿ ಮಾಡಿಕೊಂಡ ಮೇಲೆ ಅವರು ಹೆಚ್ಚು ಛಾಸಿಗಳನ್ನು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ.

Tata people have come forward to supply about 80 chassis every month and Ashoka Leylands people have also agreed to supply 70 chassis every month. That means, we are getting about 150 chassis every month. ಹೀಗೆ ನಮಗೆ ಒಂದು ತಿಂಗಳಿಗೆ ೧೫೦ ಛಾಸಿಸ್ ಸಿಕ್ಕಿದರೆ ಒಂದು ವರ್ಷಕ್ಕೆ ೧೫೦೦–೧೬೦೦ ಬಸ್ಸುಗಳನ್ನು ಹಾಕಬಹುದು. ಹಾಗೆ ಒಂದು ವೇಳೆ ಅಷ್ಟು ಬಸ್ಸುಗಳನ್ನು ನಾವು ಹಾಕಿದರೂ ಸಹ ಜನಗಳಿಗೆ ನಾವು ಅಷ್ಟು ತೃಪ್ತಿಕರವಾಗಿ ಬಡಿಸುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ಬಿ.ಟಿ ಎಸ್ ಒಂದೇ ಕಾರ್ಪೋರೇಷನ್ ಒಂದೇ ನಮಗೇ ಸೇರಿಲ್ಲಾ ಜೊತೆಗೆ ಕೆ.ಎಸ್ ಆರ್.ಸಿ. ಕಾರ್ಪೋರೇಷನ್ ಕೂಡ ಸೇರಿರುವುದರಿಂದ ಆ ಕಡೆಯೂ ಕೂಡ ನಾವು ಗಮನ ಕೊಡಬೇಕಾಗುತ್ತದೆ. ಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಒದಗಿಸಿರುವುದರಿಂದ ಎರಡನೇ ಬೇಡಿಕೆ ಏನು ಇದೆ

ಎಂದರೆ ನವಂಗೆ ಬಸ್ಸುಗಳನ್ನು ಕೊಡಬೇಕು ಅನ್ನುವುದು ಇರುವುದರಿಂದ ಆ ಕಡೆಯೂ ಕೂಡ ನಾವು ಗಮನಕೊಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡಿಕೊಟ್ಟಿರುವಾಗ ಆ ಜನರಿಗೆ ಬಸ್ಸುಗಳನ್ನೂ ಸಹ ಅವರಿಗೆ ಒದಗಿಸಿಕೊಡಬೇಕಾಗುತ್ತದೆ. ಬೆಂಗಳೂರು ಜನರಿಗೆ ಹೆಚ್ಚು ಬಸ್ಸುಗಳನ್ನು ಒದಗಿಸಿಕೊಡಬೇಕು ಅನ್ನುವ ಒಂದು ದೃಷ್ಟಿಯಿಂದ ನಾನು ಮೊದಲೇ ಹೇಳಿದಂತೆ ಮಾನ್ಯ ಆರ್ಥ ಮಂತ್ರಿಗಳು ತಮ್ಮ ಒಂದು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಏನೆಂದರೆ ಈ ಕೆ.ಎಸ್.ಆರ್.ಟಿ ಸಿಯನ್ನು ವಿಂಗಡಣೆ ಮಾಡಿ ಆದರಲ್ಲಿ ಬೆಂಗಳೂರು ನಗರಕ್ಕೆ ಒಂದು ಭಾಗ ಇನ್ನು ಉಳಿದ್ದು ೪ ಭಾಗ ಗಳನ್ನಾಗಿ ಮಾಡಿ ಅದಕ್ಕೆ ೪ ಕಾರ್ಪೊರೇಷನ್ ಮಾಡಿ ಇದನ್ನು ಉತ್ತಮ ಪಡಿಸಬೇಕು ಅನ್ನುವ ಒಂದು ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಒಂದು ಅಂತಿಮ ತೀರ್ಮಾನ ಬರದೇ ಹೋದರೂ ಕೂಡ ಈ ಒಂದು ಹಿನ್ನೆಲೆಯಲ್ಲಿ ಯೋಚನೆ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ಒಂದೊಂದು ಭಾಗಕ್ಕೂ ಒಬ್ಬೊಬ್ಬ ಛೇರ್ಮನ್ ಹುದ್ದೆ ಗಳನ್ನು ಸೃಷ್ಟಿ ಮಾಡಬಹುದಲ್ಲಾ.

ಶ್ರೀ ಆರ್. ಗುಂಡೂರಾವ್.—ಛೇರ್ಮನ್ ಒಬ್ಬರೇ, ಆಗಿರಂವುದಿಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಮೊವಲೇ ಬಹಳ ಬುದ್ದಿವಂತರು ಆರೀತಿ ಮಾಡು ವುದಿಲ್ಲ, ಹಾಗಾದರೆ ಆದರಲ್ಲಿ dual administration ಇರುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಅದಕ್ಕೆಲ್ಲಾ ಒಬ್ಬರೇ ಛೇರ್ಮನ್ ಇರುತ್ತಾರೆ. ಏತಕ್ಕೆಂದರೆ ಛೇರ್ಮನ್ ಮಂತ್ರಿ ಮಂತ್ರಿಗಳು ಒಬ್ಬರೇ ಆದರೆ ಆಡಳಿತ ಚೆನ್ನಾಗಿ ಸುಗಮವಾಗಿ ನಡೆಯುತ್ತದೆ. ಬೇರೆ ಬೇರೆ ಅಂತ ಮಾಡಿದರೆ ಅವರು ಹೇಳಿದ್ದನ್ನು ಇವರು ಒಪ್ಪುವುದಿಲ್ಲ, ಇವರು ಹೇಳಿದ್ದನ್ನು ಅವರು ಒಪ್ಪುವುದಿಲ್ಲ. ಹೀಗಾಗಿ ಆ ಆಡಳಿತದಲ್ಲಿ ಅವ್ಯವಸ್ಥೆ ಬಂದುಬಿಡುತ್ತದೆ. ನಾನು ಈ ಮಾತನ್ನು ತಮ್ಮ ಮುಂದೆ ಫ್ಯಾಂಕ್ ಆಗಿ ಹೇಳುತ್ತೇನೆ. ಹಾಗೆ ಮಾಡಿದರೆ ವೈಸ್ ಛೇರ್ಮನ್‌ದ್ದೇ ಒಂದು ಗುಂಪು ಆಗುತ್ತದೆ ಇನ್ನೊಬ್ಬರದ್ದು ಇನ್ನೊಂದು ಗುಂಪು ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಒಂದು ಉತ್ತಮ ಕೆಲಸ ಮಾಡಿದ್ದೀರಿ. ಆದೇನೆಂದರೆ ನೀವು ಆದರಲ್ಲಿ ನಾನ್ ಆಫಿಷಿಯಲ್ಸ್ ಅನ್ನು ಯಾರನ್ನೂ ಕೂಡ ನೇಮಿಸಿಲ್ಲಾ. ಆದುದರಿಂದ ನೀವೇ ಚೆನ್ನಾಗಿ ಕೆಲಸ ಮಾಡಬಹುದು.

ಶ್ರೀ ಆರ್. ಗುಂಡೂರಾವ್.—ಕೊನೇ ಹಂತದಲ್ಲಿ ನನಗೆ ಈ ಒಂದು ಕಾರ್ಪೊರೇಷನ್‌ನ ಒಂದು ಆಡಳಿತದ ಇದರ ಒಂದು ಭಾರ ನನ್ನ ಮೇಲೆ ಬಂದಿದೆ. ಇದು ಬಹಳ ಕಷ್ಟದ ಕೆಲಸ. ಈಗ ಈ ಕಾರ್ಪೊರೇಷನ ಆಡಳಿತ ಯಾವರೀತಿ ಕೆಲಸ ಮಾಡುತ್ತಾ ಇದೆ ಎನ್ನುವುದರ ಬಗ್ಗೆ ಒಂದು ಹೈಟ್ ಪೇಪರ್ ತಯಾರಿಸುತ್ತಾ ಇದ್ದೇನೆ. It will be supplied very shortly to all the hon'ble members. ಏತಕ್ಕೆಂದರೆ ಶ್ರೀ ಪಿ. ರಾಂದೇವ್ ಮತ್ತು ಶ್ರೀ ಚಿಂದ್ರಶೇಖರ್ ಅವರೂ ಸಹ ಈ ಬಸ್ಸುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು ಎಂದು ಹೇಳಿದುದರಿಂದ ನಾನು ಈ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಯಿತು.

ಇನ್ನು ಆಟೋರಿಕ್ಷಾದವರು ಒಂದು ಕಿಲೋ ಮೀಟರ್‌ಗೆ ಎಷ್ಟು ದರವನ್ನು ಮಾಡಬೇಕು ಎಂದು ಹೇಳುವುದಕ್ಕೆ ನನ್ನ ಹತ್ತಿರ ಬಂದಿದ್ದರು. ಈ ಬಗ್ಗೆ ನಾವು ಒಂದು ನೋಟಿಫಿಕೇಷನ್ ಅನ್ನು ಹೊರಡಿ ಸಿದ್ದೇವೆ. ಆದರಲ್ಲಿ ಒಂದು ದರವನ್ನು ನಿಗದಿ ಮಾಡಿದ್ದೇವೆ. ೧೯೭೫ನೇ ಇಸವಿಯಲ್ಲಿ ಒಂದು ಸಾರಿ ಇದರ ದರ ವಿವಂರ್ಶೆಯಾಯಿತು, ಅಲ್ಲಿಂದ ಇದುವರೆಗೂ ಕೂಡ ಇದರ ಬಗ್ಗೆ ಯಾವುದೂ ಕೂಡ ಮತ್ತೆ ವಿಮರ್ಶೆ ಆಗಲಿಲ್ಲಾ ಅಲ್ಲದೆ ವಿಮರ್ಶೆ ಆಗಬೇಕಾದ ಅವಶ್ಯಕತೆಯೂ ಇರಲಿಲ್ಲ. ಈಗ ಇದರ ಅವಶ್ಯಕತೆ ಬಂದಿದೆ. ಏತಕ್ಕೆಂದರೆ ಕೇಂದ್ರ ಸರ್ಕಾರದವರು ಪೆಟ್ರೋಲ್ ಬೆಲೆಯನ್ನು ಜಾಸ್ತಿ ಮಾಡಿದ್ದರಿಂದ ಈರೀತಿ ಆಗಿದೆ. ನಮ್ಮ ರಾಜ್ಯ ಸರ್ಕಾರದವರೇ ಆಗಲಿ ಅಥವಾ ಕೇಂದ್ರ ಸರ್ಕಾರದವರೇ ಆಗಲಿ ಕೆಲವು ತೆರಿಗೆಗಳನ್ನು ಹಾಕಿದರೆ ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ ದೇಶದಲ್ಲಿ ನಾನಾ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದರೆ ತೆರಿಗೆ ಹಾಕಲೇ ಬೇಕಾಗುತ್ತದೆ. ನಾವು ಈ ಆಟೋರಿಕ್ಷಾ ದದರವನ್ನು ಜಾಸ್ತಿ ಮಾಡಬೇಕಾದರೆ ಇದರಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೋ ಅಂದರೆ ಈ ಆಟೋ ರಿಕ್ಷಾದ ಮಾಲೀಕರ ಸಲಹೆಯನ್ನು ಮತ್ತು ಇದನ್ನು ಓಡಿಸುವವರ ಸಲಹೆಯನ್ನು ಮತ್ತು ಇದರಲ್ಲಿ ಯಾರು ಪ್ರಯಾಣಿಕರು ಪ್ರಯಾಣ ಮಾಡುತ್ತಾರೋ ಅವರ ಸಲಹೆಯನ್ನು ಮತ್ತು ಇದನ್ನು ಯಾರಂ

ಬಾಡಿಗೆಗೆ ತೆಗೆದುಕೊಂಡು ಓಡಿಸುತ್ತಾರೋ ಅವರ ಸಲಹೆಯನ್ನೂ ಈ ಎಲ್ಲರ ಸಲಹೆಯನ್ನೂ ಕೂಡ ನಾವು ಕೇಳಬೇಕಾಗುತ್ತದೆ. ಆದುದರಿಂದ ನಾವು ಇದಕ್ಕೆ ಒಂದು ಟೈಂ ಕೊಟ್ಟು ಅಂದರೆ ಏಪ್ರಿಲ್ ೨೮ನೇ ತಾರೀಖಿನ ಒಳಗೆ ಈ ಬಗ್ಗೆ ಒಂದು ಸಲಹೆ ಕೊಡಬೇಕು ಎಂದು ಕೇಳಿದ್ದೇನೆ. ಆನಂತರ ಇದರ ಬಗ್ಗೆ ಒಂದು ನಿರ್ಧಾರಕ್ಕೆ ಬಂದು ತೀರ್ಮಾನ ಕೈಗೊಳ್ಳುತ್ತೇವೆ. ಈ ರೀತಿ ಒಂದು ಸೂಚನೆ ಅವರಿಗೆ ಕೊಟ್ಟ ಮೇಲೂ ಕೂಡ ಅವರು ಮುಷ್ಕರವನ್ನು ತಾಳಿದ್ದಾರೆ. ಆದುದರಿಂದ ಅವರು ಆ ರೀತಿ ಮುಷ್ಕರ ಹೂಡುವುದು ತಪ್ಪು ಎಂದು ಹೇಳ ಬೇಕಾಗುತ್ತದೆ. ಅಲ್ಲದೆ ಸರ್ಕಾರ ಏನೂ ಇದರ ಬಗ್ಗೆ ಕೈಕಟ್ಟಿ ಕೊಂಡು ಕುಳಿತಿಲ್ಲಾ. ಅವರನ್ನು ಕರೆಸಿ ನೀವು ಈ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕು ಇಲ್ಲದೇ ಹೋದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಯೋಚನೆ ಮಾಡಬೇಕಾಗು ತ್ತದೆ, ಎಂದು ಹೇಳಿದ್ದೇವೆ. ಮತ್ತೇ ನೀವು ಸಾರ್ವಜನಿಕರಿಗೆ ತೊಂದರೆ ಮಾಡಿ ಈ ರೀತಿಯಾದ ಮುಷ್ಕರ ಮಾಡುವುದು ತಪ್ಪು, ನೀವು ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳಿದ ಮೇಲೆ ಅವರು ತಮ್ಮ ಮುಷ್ಕರವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸಾರ್ವಜನಿಕ ರಿಂದಲೂ ಕೂಡ ಅನೇಕ ಸಲಹೆಗಳು ಬಂದಿವೆ ನಾವು ತೂಡ ಇದರ ಪ್ರತಿಕ್ರಿಯೆಯನ್ನೆಲ್ಲಾ ಯೋಚನೆ ಮಾಡಿ ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕು ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ, ಹಾಗೂ ತಾವು ಕೂಡ ಈ ಬಗ್ಗೆ ಏನು ಒಂದು ಸಲಹೆಯನ್ನು ಕೊಟ್ಟಿದ್ದೀರಿ ಇದು ಒಂದು ಎಸೆನ್ಷಿಯಲ್ ಸರ್ವಿಸ್ ಅಂತ ಇರಬೇಕು ಅಂತ ಏನು ಹೇಳಿದ್ದೀರಿ ಅದು ಈಗಾಗಲೇ ಬಿಲ್ಲಿನಲ್ಲಿ ಖಂಡಿತವಾಗಿದೆ. ಮುಖ್ಯಮಂತ್ರಿಗಳು ಈಗಾಗಲೇ ಆ ಬಿಲ್ಲನ್ನು ಕಳೆದ ಆದಿವೇಶನದಲ್ಲಿ ಮಂಡಿಸಿದ್ದಾರೆ. ಅದನ್ನು ಆದಷ್ಟು ಬೇಗ ಇಲ್ಲಿ ಚರ್ಚೆಗೆ ತೆಗೆದುಕೊಂಡು ಮುಗಿಸಿದರೆ ಒಳ್ಳೆಯದು. ಏತಕ್ಕೆಂದರೆ ಒಂದೊಂದು ಸಲ ಬಿ. ಟಿ. ಎಸ್. ಬಸ್‌ನಲ್ಲಿ ಕೆಲವರು ಯಾವ್ಯಾವುದೋ ಕಾರಣದಿಂದ ಅಂದರೆ ಪೋಲೀಸ್ ಕಾನ್‌ಸ್ಟೇಬಲ್‌ಗೂ ಮತ್ತು ಇವರಿಗೂ ಒಂದು ಮನಸ್ತಾಪ ಏನಾದರೂ ಬಂದರೆ ಆವಾಗ ಮತ್ತು ಡ್ರೈವರ್‌ಗೂ ಮತ್ತು ಸಬ್ ಇನ್‌ಸ್ಪೆಕ್ಟರಿಗೂ ಯಾವುದಾದರೂ ಮನಸ್ತಾಪ ಬಂದಾಗ ಯಾವ ಗಳಿಗೆ ಎಂದರೆ ಆ ಘಳಿಗೆಯಲ್ಲಿ ಮುಷ್ಕರ ಮಾಡಿಬಿಡುತ್ತಾರೆ. ಆದರಿಂದ ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ ತೊಂದರೆಯಾಗುತ್ತದೆ ನೋಡಿ. ಏತಕ್ಕೆಂದರೆ ಈ ಬಿ.ಟಿ.ಎಸ್. ಬಸ್ ಅನ್ನೇ ಅವಲಂಬಿಸಿಕೊಂಡಿರ ತಕ್ಕಂಥಾ ಜನರಿಗೆ ಎಷ್ಟು ತೊಂದರೆಯಾಗುತ್ತದೆ ನೋಡಿ. ಮತ್ತು ಇದರಿಂದ ಎಷ್ಟು ಲುಕ್ಸಾನು ಆಗುತ್ತದೆ ಅನ್ನುವುದನ್ನೂ ಸಹ ನೋಡಬೇಕು. ಪ್ರತಿದಿನ ಈ ಬಸ್ಸಿನಲ್ಲೇ ಪ್ರಯಾಣ ಮಾಡುತ್ತಿರುವ ಪ್ರಯಾಣಿಕರಿಗೆ ಎಷ್ಟು ತೊಂದರೆಯಾಗುತ್ತದೆ ಅನ್ನುವುದನ್ನು ನಾವು ನೋಡಬೇಕು ತಮಗೆ ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಪ್ರತಿದಿನವು ಕೂಡ ಆಟೋರಿಕ್ಷಾದಲ್ಲಿ ಪ್ರಯಾಣ ಮಾಡತಕ್ಕಂಥಾವರ ಸಂಖ್ಯೆ ೩ ಲಕ್ಷ ಜನರು ಇದ್ದಾರೆ, ಹಾಗೆಯೇ ನಮ್ಮ ಬಿ.ಟಿ.ವಿಸ್. ಬಸ್‌ನಲ್ಲಿ ಪ್ರತಿದಿನವೂ ಪ್ರಯಾಣ ಮಾಡತಕ್ಕಂಥಾವರ ಸಂಖ್ಯೆ ೧೦ ಲಕ್ಷ ಜನರು ಇದ್ದಾರೆ. ಈ ಬಿ.ಟಿ.ಎಸ್. ಬಸ್ಸು ಮತ್ತು ಆಟೋರಿಕ್ಷಾದಿಂದ ಪ್ರತಿದಿನವು ಪ್ರಯಾಣ ಮಾಡತಕ್ಕಂಥಾ ಈ ೧೩ಲಕ್ಷ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಹಾಗೂ ಇದರಿಂದ ಎಷ್ಟು ಹಣ ಲುಕ್ಸಾನು ಆಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಏತಕ್ಕೆಂದರೆ ಅನೇಕ ಜನರು ಸಣ್ಣ ಸಣ್ಣ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರು ಇದ್ದಾರೆ. ಆ ಜನರು ಆಟೋರಿಕ್ಷಾದಲ್ಲಿ ಹೋಗುವುದಕ್ಕೆ ಹೆಚ್ಚು ದುಡ್ಡು ಇಲ್ಲ, ಮೇಲಾಗಿ ನಮ್ಮ ನಗರದಲ್ಲಿ ೪-೫ ದೊಡ್ಡ ದೊಡ್ಡ ಫ್ಯಾಕ್ಟರಿಗಳು ಏನು ಇವೆ ಅವರೆಲ್ಲಾ ಈ ಬಿ.ಟಿ ಎಸ್. ಬಸ್‌ನಲ್ಲೇ ಪ್ರಯಾಣ ಮಾಡಬೇಕಾಗಿರುವುದರಿಂದ ಇದರ ಕಡೆ ನಾವು ಹೆಚ್ಚು ಗಮನ ಕೊಡಬೇಕಾಗು ತ್ತದೆ.

ಈ ದೃಷ್ಟಿಯಿಂದ, ಇದು ದೇಶದ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮವಾಗುತ್ತದೆ, ಜನ ರಿಗೆ ಸಂಸಾರದ ಮೇಲೆ ಪರಿಣಾಮವಾಗುತ್ತದೆ, ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಮುಷ್ಕರ ಮಾಡಿದ್ದುದು ಸರಿಯೆಂದು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ, ಮುಷ್ಕರ ನಿಲ್ಲಿಸುವುದಕ್ಕೆ ಮತ್ತು ಯಾವುದೇ ತರಹದಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗುವಂತೆ ಮಾಡಿ ದರೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಕಾನೂನೂ ಇಲಾಖೆಯ ಜೊತೆಯಲ್ಲಿ ನಾವು ಸಂಪರ್ಕ ಬೆಳಸಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

೧೧.೦೦ ಎ.ಎಂ.

ಶ್ರೀ ಪಿ. ರಾಮದೇವ್. —ಆಲ್ಟರ್ನೇಟೀವ್ ಟ್ರಾನ್ಸ್‌ಪೋರ್ಟ್ ಏನಾದರೂ ಯೋಚನೆ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್. —ನಾವು ಅಂತಿಮವಾಗಿ ದರವನ್ನು ನಿಗಧಿ ಮಾಡಿದ ಮೇಲೆ ಮುಷ್ಕರ ನಿಲ್ಲಿಸುವುದಕ್ಕೆ ಖಾಯಂ ವ್ಯವಸ್ಥೆಯನ್ನು ಮಾಡುತ್ತೇವೆ. ಎಲ್ಲರಿಂದಲೂ ಇದರ ಬಗ್ಗೆ ಅಭಿಪ್ರಾಯ ಸಂಗ್ರಹಣೆ ಮಾಡಿ, ಶಾಸಕರನ್ನೂ ಕರೆದು ಚರ್ಚೆ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಎಲ್ಲರ ಸಲಹೆಗಳು ಬಂದ ಮೇಲೆ, ನಾವೆಲ್ಲರೂ ಸೇರಿ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಈ ಸಮಯದಲ್ಲಿ ನಾನು ಭರವಸೆ ಕೊಡುತ್ತೇನೆ. ಮಾನ್ಯ ಸದಸ್ಯರಾದ ರಾಮದೇವ್ ಅವರು ಆಲ್ಟರ್ನೇಟೀವ್ ಅರೇಂಜಮೆಂಟ್ಸ್ ಬಗ್ಗೆ ಕೇಳಿದರು. ಒಂದನೆಯದಾಗಿ, ನಾವು ಅನ್‌ಎಂಪ್ಲಾಯ್ಡ್ ಗ್ರಾಜ್ಯುಯೇಟ್ಸ್‌ಗೆ ಸರ್ಕಾರದ ಗ್ಯಾರಂಟಿ ಕೊಟ್ಟು ಮಿನಿ ಬಸ್ಸುಗಳನ್ನು ಓಡಿಸುವುದು. ಇದನ್ನು ಡೆಲ್ಲಿಯಲ್ಲಿ ಪ್ರಾರಂಭ ಮಾಡಿ, ಇದರಿಂದ ಅಷ್ಟು ಪ್ರಯೋಜನವಾಗಲಿಲ್ಲ ಎನ್ನುವ ಪರಿದಿ ನಮಗೆ ಬಂದಿದೆ. ಎರಡನೆಯದು ಅಂಡರ್ ಗೌಂಡ್ ಟ್ರೇನ್–ಇದು ಸಧ್ಯಕ್ಕೆ ಆಗುವ ವಿಷಯವಲ್ಲ. ಕಲ್ಕತ್ತದಲ್ಲಿಯೇ ವರ್ಲ್ಡ್ ಬ್ಯಾಂಕಿನವರ ಸಹಾಯಕ್ಕಾಗಿ ೧೫–೨೦ ವರ್ಷಗಳವರೆಗೆ ಪ್ರಯತ್ನ ಮಾಡಿ, ಈಗ ಅದನ್ನು ಕಾರ್ಯಗತ ಮಾಡಿದ್ದಾರೆ. ಇದೂ ಸಹ ೧೦–೨೦ ವರ್ಷಗಳ ಯೋಜನೆ. ಬೆಂಗಳೂರು ನಗರ ಇತರೆ ನಗರಗಳಂತೆ ಪ್ಲಾನ್ ಮಾಡಿ ಕಟ್ಟಿದ ನಗರವಲ್ಲ. ಅಂಡರ್‌ಗೌಂಡ್ ಟ್ರೇನ್ ಹಾಕಬೇಕಾದರೆ ಅನೇಕ ಎಕ್ಸ್‌ಪರ್ಟ್ಸ್‌ಗಳ ಸಲಹೆ ತೆಗೆದುಕೊಳ್ಳಬೇಕಾಗುತ್ತದೆ, ಇದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ಬೇಕಾಗುತ್ತದೆ. ಇನ್ನೊಂದು ಸಲಹೆಯನ್ನು ಕೆಲವರು ನಮ್ಮ ಮುಂದೆ ಇಟ್ಟಿದ್ದಾರೆ. ಟ್ರಾಲಿ ತರಹ ಆಕಾಶದಲ್ಲಿ ತೆಗೆದುಕೊಂಡು ಹೋಗುವುದು. ಇದಕ್ಕೂ ಜಾಸ್ತಿ ಹಣ ಖರ್ಚಾಗುತ್ತದೆ. ಒಂದೊಂದು ಟ್ರಾಲಿಯಲ್ಲಿ ಸುಮಾರು ೧೦೦ ಜನ ಪ್ರಯಾಣ ಮಾಡಬಹುದು. ಇದನ್ನು ಎರಡು ವರ್ಷಗಳಲ್ಲಿ ಮಂಗಿಸಿಕೊಡುತ್ತೇವೆಂದು ವಿದೇಶದವರಿಂದ ನಮಗೆ ಸಲಹೆ ಕೊಟ್ಟಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರಿಂದ ನಮಗೆ ಪರ್ಮಿಷನ್ ಬೇಕಾಗುತ್ತದೆ. ಇದನ್ನೂ ಸಹ ನಾವು ವಿಚಾರ ಮಾಡುತ್ತಿದ್ದೇವೆ. ಹೇಗಾದರೂಸಹ ಬೆಂಗಳೂರು ನಾಗರೀಕರಿಗೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಾವು ೫೦೦ ಬಸ್ಸುಗಳನ್ನು ಹೆಚ್ಚು ಮಾಡಿದರೂ ಸಹ ಟ್ರಾಫಿಕ್‌ನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ನಮ್ಮ ರೋಡುಗಳು ಇಲ್ಲಿ ಆಗಲವಾಗಿಲ್ಲ, ಇನ್ನೂ ೫೦೦ ಬಸ್ಸುಗಳು ರಸ್ತೆಯ ಮೇಲೆ ಬಂದರೆ, ಟ್ರಾಫಿಕ್‌ನ ಪರಿಸ್ಥಿತಿ ಬಹಳ ಹದಗೆಟ್ಟು ಹೋಗುತ್ತದೆ. ಇದೆಲ್ಲವನ್ನೂ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿ ಸಾರ್ವಜನಿಕರಿಗೆ ಯಾವ ರೀತಿಯಿಂದ ಕಡಿಮೆ ದರದಲ್ಲಿ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆನ್ನುವುದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಮಳ್ಳೂರು ಆನಂದರಾವ್. —ಬೆಂಗಳೂರು ನಗರದಲ್ಲಿ ಆಟೋ ರಿಕ್ಷಾದವರು ಆಗಿಂದಾಗ್ಗೆ ಮುಷ್ಕರ ಮಾಡುತ್ತಾ ಇರುತ್ತಾರೆ. ಇವರುಗಳು ಮುಷ್ಕರ ಮಾಡದೆ ಇರುವ ಹಾಗೆ ನಿರ್ದಿಷ್ಟವಾಗಿ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್. —ಆಟೋ ರಿಕ್ಷಾದವರು ಇನ್ನು ಮುಂದೆ ಸ್ಟ್ರೈಕ್ ಮಾಡದೆ ಇರುವ ರೀತಿಯಲ್ಲಿ 'ಎಸೆನ್ಷಿಯಲ್ ಸರ್ವೀಸಸ್ ಆಕ್ಟನ್ನು' ಇವರಿಗೆ ಅನ್ವಯ ಮಾಡಿ, ಬಸ್‌ನವರಾಗಲೀ, ಆಟೋದವರಾಗಲಿ ಮುಷ್ಕರ ಮಾಡುವುದಕ್ಕೆ ಸಾಧ್ಯವಿಲ್ಲದ ಹಾಗೆ ಮಾಡುತ್ತೇವೆ.

ಶ್ರೀ ಮಳ್ಳೂರು ಆನಂದರಾವ್. —ಆಟೋ ರಿಕ್ಷಾದವರು ಮುಷ್ಕರ ಮಾಡುವುದು ಮೀಟರ್ ದರವನ್ನು ಏರಿಸಬೇಕು ಎನ್ನುವುದಕ್ಕೆ ಅವರ ವಾದದಂತೆ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ, ಅದೇನೋ ನಿಜ. ಆದರೆ ಅವರು ಮೀಟರ್ ಕನಿಷ್ಟ ಮಿತಿಯನ್ನು ೯೦ ಪೈಸೆಗಿಂತ ಹೆಚ್ಚು ಕೇಳುವುದಕ್ಕೆ ಕಾರಣ ಏನು? ನಾವು ಸರಿಯಾಗಿ ಇದನ್ನು ವರ್ಕೌಟ್ ಮಾಡಿದಾಗ ೯೦ ಪೈಸೆ ಕೂಡ ಇದು ಹೆಚ್ಚಾಗುತ್ತದೆ. ಒಂದು ಕಿಲೋ ಮೀಟರ್‌ಗೆ ಎರಡು ಪೈಸೆ ಹೆಚ್ಚಾಗಬಹುದು; ಹೋಗಲಿ ೧೦–೧೫ ಪೈಸೆ ಹೆಚ್ಚು ಮಾಡಲಿ, ಆದರೆ ಇವರು ಒಂದು ರೂಪಾಯಿಗಳವರೆಗೆ ಹೆಚ್ಚು ಮಾಡಿದರೆ ಅದು ಅವಾಸ್ತವವಾಗುತ್ತದೆ. ಆಟೋ ರಿಕ್ಷಾದ ಕನಿಷ್ಟ ದರವನ್ನು ಒಂದು ರೂಪಾಯಿಗಳಿಗೆ ಮಾಡಿದರೆ, ಪ್ರಯಾಣ ಮಾಡುವವರು ಇದನ್ನು ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ದಯವಿಟ್ಟು ತಾವು ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಕೆ. ಭಾಸ್ಕರ್ ನಾಯಿಡು.—ಸಭಾಧ್ಯಕ್ಷರೇ, ಕಾಲಿಂಗ್ ಆಟೆಶನ್ ನೋಟೀಸ್‌ಗೆ ಯಾರು ಯಾರು ಸಹಿ ಹಾಕಿದ್ದಾರೋ ಅವರು ಮಾತ್ರ ಪ್ರಶ್ನೆ ಕೇಳಲಿಕ್ಕೆ ಅರ್ಹರು ಬೇರೆಯವರು ಕೇಳಲಿಕ್ಕೆ ಅವ ಕಾಶವಿಲ್ಲ ಎಂದು ತಾವು ಹೇಳಿದ್ದೀರಿ. May I know from the Chair whether other Members who have not signed the Call Attention are also eligible to ask questions on the subject?

ಛೇರ್ಮನ್‌ರವರು.—ಈಗಿರುವ ಪ್ರಶ್ನೆ ಏನೆಂದರೆ, ಕಾಲಿಂಗ್ ಆಟೆನ್‌ಷನ್ ನೋಟೀಸ್‌ಗೆ ಯಾರ ಯಾರು ಸಹಿ ಮಾಡುತ್ತಾರೆ ಅವರು ಮಾತ್ರ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಇದೆ. ಇದು ನಿಯ ಮದ ಪ್ರಕಾರ. ಅಧ್ಯಕ್ಷರ ಡಿಸ್ಕ್ರಿಷನ್‌ನಲ್ಲಿ ಬೇರೆಯವರಿಗೆ ಅವಕಾಶ ಕೊಟ್ಟರೆ ಅವಕಾಶ ಸಿಕ್ಕುತ್ತದೆ. ಅದನ್ನು ತಾವು ಹಕ್ಕಿನ ರೂಪದಲ್ಲಿ ಕೇಳುವುದಕ್ಕಾಗುವುದಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಈ ಆಟೋ ರಿಕ್ಷಾ ಡ್ರೈವರ್‌ಗಳಲ್ಲಿ ಎರಡು ನಮೂನೆ ಇದೆ. ಒಂದು ಮಾಲೀಕರೇ ಡ್ರೈವರ್ಸ್ ಆಗಿರುವುದು, ಇನ್ನೊಂದು ಪೆಜಾರಿಟಿ ಬಾಡಿಗೆಗೆ ತೆಗೆದುಕೊಂಡು ಆಟೋ ಓಡಿಸುವಂತವರು. ಸರ್ಕಾರದವರು ನಿಗಧಿ ಮಾಡಿದಂಥ ದರದಲ್ಲಿ ಬಾಡಿಗೆಗೆ ಆಟೋ ಓಡಿಸು ವಂಥವರಿಗೆ ಏನೂ ಸಿಕ್ಕುವುದಿಲ್ಲ. ಅವರೂ ಜೀವನ ಮಾಡಬೇಕಾಗುತ್ತದೆ, ಪೆಟ್ರೋಲ್ ಆಯಿಲ್ ಬೆಲೆ ಗಳು ಜಾಸ್ತಿಯಾಗಿವೆ. ಇದಕ್ಕೆ ಸರ್ಕಾರದವರು ಒಂದು ಸ್ಟಾಂಡಿಂಗ್ ಕಮಿಟಿಯನ್ನು ಇಟ್ಟುಕೊಂಡು, ನಿಗಧಿ ಮಾಡತಕ್ಕ ದರದಲ್ಲಿ ಪೆಟ್ರೋಲ್‌ಗೆ ಎಷ್ಟು ಭಾಗ ಹೋಗುತ್ತದೆ, ಎಷ್ಟು ಭಾಗ ಮೇಂಟೆನೆನ್ಸ್‌ಗೆ ಹೋಗುತ್ತದೆ, ಎಷ್ಟು ಭಾಗ ಕೂಲಿಗೆ ಹೋಗುತ್ತದೆ ಎಂದು ಸರಿಯಾಗಿ ಯೋಚನೆ ಮಾಡಿ ಒಂದು ಅರೇಂಜ್‌ಮೆಂಟ್ ಮಾಡಿದರೆ ಒಳ್ಳೆಯದು.

ಛೇರ್ಮನ್‌ರವರು.—ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ಕಾಲಿಂಗ ಆಟೆಷನ್ ನೋಟೀಸನ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಕೊಡುತ್ತೇನೆ.

ಛೇರ್ಮನ್‌ರವರು.—ತಾವು ಬೇರೆ ಕಾಲದಲ್ಲಿ ಸಲಹೆ ಕೊಡಬಹುದು.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಮಂತ್ರಿಗಳು ಮುಷ್ಕರವನ್ನು ರದ್ದು ಮಾಡು ವುದಕ್ಕೆ ಹೊರಟಿದ್ದಾರೆ. ಡ್ರೈವರ್‌ಗಳ ಗತಿ ಏನು ?

All the drivers' interests must be taken care of ; they are also servants.

MR. CHAIRMAN.—I may tell the House that the scope of a Calling Attention Motion is very much limited. On the statement made by the Hon. Minister members are allowed to put questions and not make suggestions or criticisms.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸ್ವಾಮಿ, ಮಾನ್ಯ ಮಂತ್ರಿಗಳು ಅಲ್ಪರಾನೇಟಿಪ್ ಸಿಸ್ಟಮನ್ನು ಇದಕ್ಕೆ ಬದಲಾಗಿ ಮಾಡುತ್ತೇವೆಂದು ಹೇಳಿದರು. ಆದರೆ ಇತ್ತೀಚೆಗೆ ಬಿ.ಟಿ.ಎಸ್. ಬಸ್‌ಗಳಿಗೆ ಸಮನಾಗಿ ಜಟಕಾ ಗಾಡಿಗಳನ್ನು ಓಡಿಸಿದ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಕಾರಣದಿಂದ ಇನ್ನು ಮುಂದೆ ಬಿ.ಟಿ.ಎಸ್. ಬಸ್‌ಗಳನ್ನು ಕಡಿಮೆ ಮಾಡಿ ಜಟಕಾ ಗಾಡಿಗಳನ್ನು ಜಾಸ್ತಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ಹೇಗೆ ?

ಶ್ರೀ ಆರ್. ಗುಂಡೂರಾವ್.—ಸಾರ್ವಜನಿಕರು ಜಟಕಾ ಗಾಡಿಗಳಲ್ಲಿ ಹೋಗುತ್ತೇವೆಂದು ಹೇಳಿ ದರೆ, ಅದಕ್ಕೆ ನಮ್ಮ ಆಭ್ಯಂತರವೇನೂ ಇಲ್ಲ. ಇದಕ್ಕೆ ಸರ್ಕಾರ ಏನು ರಿಸ್ಟ್ರಿಕ್ಟ್ ಮಾಡಿಲ್ಲ. ಮಾನ್ಯ ಸದಸ್ಯರುಗಳು ದರದ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟರು. ದರವನ್ನು ಹೆಚ್ಚು ಕಡಿಮೆ ಮಾಡುವ ವಿಚಾರದಲ್ಲಿ ಈಗಾಗಲೇ ತಮ್ಮಗಳ ಸಲಹೆಯನ್ನು ಕೊಡಬೇಕೆಂದು ಕೇಳಿದ್ದೆನೆ. ಮತ್ತು ಇದರ ಬಗ್ಗೆ ಚರ್ಚೆ ಮಾಡಲು ತಮ್ಮನ್ನೆಲ್ಲಾ ಕರೆಯುತ್ತೇನೆ. ಅಲ್ಲಿ ಕುಳಿತು ನಾವೆಲ್ಲಾ ಚರ್ಚೆ ಮಾಡಿ ಒಂದು ದರ ವನ್ನು ನಿಗದಿ ಮಾಡೋಣ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸ್ವಾಮಿ, ನಾನು ೨೧ನೇ ತಾರೀಖು ಸರ್ಕಾರಿ ನೌಕರರ ಚಳುವಳಿಯ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಇಂದು ತೆಗೆದುಕೊಳ್ಳೋಣ ಎಂದು ಆಧ್ಯಕ್ಷರು ಹೇಳಿದ್ದರು. ಆದರೆ ಇಂದು ತೆಗೆದುಕೊಳ್ಳಲಿಲ್ಲ. ಈಗ ಅವರಿಗೆ ಕೊಟ್ಟಿರುವ ಒಂದು ಡಿ.ಎ. ಯಿಂದ ಆವರಿಗೆ ಸಮಾಧಾನವಾಗಿಲ್ಲ.

ಚೇರ್ಮನ್‌ರವರು.—ತಾವು ಹೇಳಿದ್ದು ಸರ್ಕಾರಕ್ಕೆ ಅರ್ಥವಾಗಿದೆ. ಆದಕಾರಣ ಆದಷ್ಟು ಜಾಗ್ರತೆ ತಮ್ಮ ನೋಟೀಸ್‌ಗೆ ಉತ್ತರ ಕೊಡಲು ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸೋಮವಾರವಾದರೂ ಇದನ್ನು ತೆಗೆದುಕೊಳ್ಳಬೇಕು ?

ಚೇರ್ಮನ್‌ರವರು.— ಆಗಲಿ.

MR. CHAIRMAN.—The hon. Member Sri T. R. Shamanna will now speak on the Budget.

Budget Estimates for 1979-80 General Discussion Debate (Contd).

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ) :—ಮಾನ್ಯ ಸಭಾಧ್ಯಕ್ಷರೇ, ಈ ದಿನ ನಮ್ಮ ಮುಂದೆ ಮಂಡಿಸಿರತಕ್ಕಂಥ ಬಡ್ಜೆಟ್ ಎಸ್ಟಿಮೇಟ್ ಬಗ್ಗೆ ಕೆಲವು ಸಲಹೆಗಳನ್ನು ಹಾಗೂ ಕೆಲವು ಅಕ್ಷೇಪಣೆಗಳನ್ನು ಹೇಳಬೇಕಾದುದು ಅಗತ್ಯವಾಗಿದೆ. ಮೊದಲನೆಯದಾಗಿ...

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಈಗ ಆರ್ಥಮಂತ್ರಿಗಳೇ ಇಲ್ಲ.

ಚೇರ್‌ಮನ್‌ರವರು : ಅವರು ಈಗ ಬಿಸೆನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿದ್ದಾರೆ. ಮಾನ್ಯ ಶಿವಯ್ಯನವರು ಅವರು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ತಿಳಿದಿರುವಂತೆ ಮಾನ್ಯ ಆರ್ಥ ಮಂತ್ರಿಗಳು ಬಿಸೆನೆಸ್ ಅಡ್ವೈಜರಿ ಕಮಿಟಿಯ ಸದಸ್ಯರಾಗಿಲ್ಲ. ಸರ್ಕಾರದ ಪರವಾಗಿ ಬೇರೆ ಮಂತ್ರಿಗಳಿದ್ದಾರೆ. ಆದಕಾರಣ ಆವರು ಈಗ ಇಲ್ಲಿ ಇರಬೇಕಾಗಿತ್ತು. 'ಏಕೆಂದರೆ, ಬೇರೆ ಮಂತ್ರಿಗಳು ನೋಟ್ ಮಾಡಿಕೊಂಡ ಅವರು ಬಂದ ಮೇಲೆ ಕೊಡುವುದಕ್ಕಿಂತ ಅವರೇ ಇಲ್ಲಿ ಇದ್ದು ಕೇಳಿದರೆ ಆದರ ಪರಿಣಾಮ ಹೆಚ್ಚಾಗಿರುತ್ತದೆ. ಮತ್ತು ಅವರ ಇಲಾಖೆಗೆ ಸಂಬಂಧಪಟ್ಟಂತೆ ಇಲ್ಲಿ ಸಾಮಾನ್ಯ ಚರ್ಚೆ ನಡೆಯುತ್ತಿರುವಾಗ ಅವರೇ ಇಲ್ಲಿ ಇರಬೇಕಾದುದು ಬಹಳ ಮುಖ್ಯ

MR. CHAIRMAN.—The hon. Member's information is not correct. The Finance Minister is also attending that committee now.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕಂಥ ಬಡ್ಜೆಟನ್ನು ಸ್ವಲ್ಪ ವಿಚಾರ ಮಾಡಿ ನೋಡಿದರೆ, ಈ ಆಯವ್ಯಯ ಪತ್ರ ಸಾಧಾರಣವಾಗಿ 'ಓಟ್ಸು' ಗಳಿಕೆಗೆ ಮಾಡಿರುವಂತಹ ಬಡ್ಜೆಟ್ ಹೊರತು. ಇದರಿಂದ ಸಾರ್ವಜನಿಕರಿಗಾಗಲೀ ಅಥವಾ ಸಾಮಾನ್ಯ ಜನರಿಗಾಗಲೀ ಹೆಚ್ಚು ಪ್ರಯೋಜನವಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಸಾಧಾರಣವಾಗಿ ಕೇಂದ್ರ ಸರ್ಕಾರದವರು ನಗರದ ಜನರ ಮೇಲೆ ಹೆಚ್ಚಿನ ಕರಭಾರ ಹಾಕುವಂತೆ ನಮ್ಮ ಸರ್ಕಾರವೂ ಕೂಡ ತಾವು ಕೇಂದ್ರ ಸರ್ಕಾರಕ್ಕೆ ಯಾವ ರೀತಿಯಿಂದಲೂ ಕಡಿಮೆ ಇಲ್ಲವೆಂದುಕೊಂಡು, ಅವರು ೨೦ ರಾಜ್ಯಗಳಿಗೆ ಸಂಬಂಧಪಟ್ಟಂತೆ ೬೦೦ ಕೋಟಿ ರೂಪಾಯಿಗಳನ್ನು ತೆರಿಗೆ ಹಾಕಿದರೆ, ಇವರು ೩೦ ಕೋಟಿ ರೂಪಾಯಿಗಳಷ್ಟು ಅಂದರೆ ಅದಕ್ಕೆ ಸರಿಯಾದ ರೀತಿಯಲ್ಲಿ ಹಾಕಿದ್ದಾರೆ. ಕೇಂದ್ರ ಸರ್ಕಾರದ್ದು ಎಷ್ಟು ಖೋತಾ ಬಡ್ಜೆಟ್ ಇದೆಯೋ ಅದಕ್ಕಿಂತ ಹೆಚ್ಚಿನ ಖೋತಾ ಬಡ್ಜೆಟ್ ನಮ್ಮ ರಾಜ್ಯ ಸರ್ಕಾರದ್ದಾಗಿದೆ. ಈ ಬಡ್ಜೆಟ್‌ನಲ್ಲಿ ಎರಡು ವಿಚಾರಗಳು ಮುಖ್ಯವಾದುದು. ಒಂದನೆಯದು, ಯಾರಿಗೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲವೋ ಅಂತಹವರ ಮಕ್ಕಳಿಗೆ ಫ್ರೀಷಿಪ್‌ನ್ನು ಎಲ್ಲ ಹಂತದಲ್ಲಿಯೂ ಕೊಡಲಾಗುತ್ತದೆಂದು ಇಲ್ಲಿ ಹೇಳಿರುವುದು ಶ್ಲಾಘನೀಯವಾದುದು. ಆದರೆ ಇದನ್ನು ಸರಿಯಾದ ರೀತಿಯಲ್ಲಿ ನಡೆಸಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಆಕ್ಟ್ರಾಯ್‌ನ್ನು ರದ್ದು ಮಾಡುವುದು. ಇದರ ಒಂದು ಕೀರ್ತಿ ತಮಗೇ ಸಲ್ಲುತ್ತದೆಂದು ಅವರು ಹೇಳಿಕೊಳ್ಳಬಹುದು. ಆದರೆ ಇದರ ಬಗ್ಗೆ ಅವರು ಸರಿಯಾದ